ನಿಯಮ ೩೩ಳಿರ ಮೇರೆಗೆ

(i) ಕೊಳ್ಳೇಗಾಲ ತಾಲ್ಲೂಕಿನ ನೂರಾರು ಹರಿಜನರು–ಗಿರಿಜನರು ಸರ್ಕಾರಿ ಭೂಮಿಯಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿಕೊಂಡಿದ್ದವರಿಗೆ ಪಟ್ಟಾ ನೀಡದಿರುವ ಬಗ್ಗೆ

ಶ್ರೀ ಬಿ. ರಾಜಂಗಾಡ (ಹನೂರ).—ಸನ್ಮಾನ್ಯ ಅಧ್ಯಕ್ಷರೇ, ಕೊಳ್ಳೇಗಾಲ ತಾಲ್ಲೂಕಿನಲ್ಲಿ ನೂರಾರು ಜನ ಹರಿಜನರು, ಗಿರಿಜನರು ಹಿಂದುಳಿದವರು ಸರ್ಕಾರಿ ಭೂಮಿಯನ್ನು ಹತ್ತಾರು ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ. ಅವರುಗಳಿಗೆ ಪಟ್ಟಾ ಕೊಟ್ಟಿಲ್ಲ. ಕೆಲವು ರೈತರುಗಳು ಆ ಸರ್ಕಾರಿ ಭೂಮಿಯಲ್ಲಿ ವಾಸದ ಮನೆಯನ್ನು, ನೀರಾವರಿ ಬಾವಿಯನ್ನು ಸಹಾ ತೆಗೆದಿರುತ್ತಾರೆ. ನೀರಾವರಿ ಬಾವಿಯಲ್ಲಿ ನೀರನ್ನು ತೆಗೆದು ವಿದ್ಯುತ್ ಮೋಟಾರು ಮೂಲಕ ವ್ಯವಸಾಯ ಮಾಡಲು ಆ ಭೂಮಿಗೆ ಪಟ್ಟಾ ನೀಡದೇ ಇರುವುದರಿಂದ, ವಿದ್ಯುಚ್ಛಕ್ತಿ ಸರಬರಾಜು ಮಾಡುವುದಿಲ್ಲವೆಂದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಹೇಳುತ್ತಿದ್ದಾರೆ. ಈ ಉಭಯ ಸಂಕಟದಲ್ಲಿ ಸಿಕ್ಕಿ ಸರಳಾಡುತ್ತಿರುವವರಿಗೆ, ಬೇಗನೆ ಪಟ್ಟಾ ಕೊಡಲು ತಾವು ಆದೇಶ ನೀಡಬೆ ಕೆಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ವಿ.ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

(ii) ಜಮಖಂಡಿ ತಾಲ್ಲೂಕಿನಲ್ಲಿ, ರಬಕವಿ ಬನಹಟ್ಟಿ ನಗರ ಪಾಲಿಕೆಯ ಸರಹದ್ದಿನಲ್ಲಿ ಕಾಮಾಲೆ ರೋಗ ಹರಡಿರುವ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳದೇ ಇರುವ ಬಗ್ಗೆ

ಶ್ರೀ ಜಿ.ಎಸ್. ಬಾಗಲಕೋಟೆ (ಜಮಖಂಡಿ).—ಸನ್ಮಾನ್ಯ ಅಧ್ಯಕ್ಷರೆ, ಜಮಖಂಡಿ ತಾಲ್ಲೂಕಿನಲ್ಲಿ ವಿಶೇಷವಾಗಿ ರಬಕವಿ– ಬನಹಟ್ಟಿ ನಗರ ಪಾಲಿಕೆಯ ಸರಹದ್ದಿನಲ್ಲಿ ಕಾಮಾಲೆ ರೋಗ ವಿಪರೀತವಾಗಿ ಹಬ್ಬಿ, ಗಂಭೀರವಾದ ಸಮಸ್ಯೆ ಜನತೆಯ ಆರೋಗ್ಯ ದೃಷ್ಟಿಯಿಂದ ಉದ್ಭವಿಸಿದೆ. ಈ ರೋಗದಿಂದ ಬಳಲುವವರ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ತಾತ್ಕಾಲಿಕ ಕ್ರಮ ಕೈಗೊಳ್ಳುವಲ್ಲಿ ವಿಫಲವಾದ ಬಗ್ಗೆ ಸನ್ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಿ.ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—ಈಗ ತಾನೇ ನನ್ನ ಗಮನಕ್ಕೆ ವಿಷಯವನ್ನು ತಂದಿದ್ದಾರೆ, ಆದರ ಬಗ್ಗೆ ಪರಿಶೀಲನೆ ಮಾಡಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜಿ ಎಸ್. ಬಾಗಲಕೋಟೆ.—ಜಮಖಂಡಿ ತಾಲ್ಲೂಕಿನಲ್ಲಿ ಈ ರೋಗ ವ್ಯಾಪಕವಾಗಿ ಹರಡಿದೆ. ಅದಕ್ಕೆ ಪರಿಹಾರ ಸಿಕ್ಕಿಲ್ಲ. ಇದರ ಬಗ್ಗೆ ಸರ್ಕಾರ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ವಿ.ಎಲ್. ಪಾಟೀಲ್.— ಸಂಬಂಧಪಟ್ಟ ಮಂತ್ರಿಯವರಿಗೆ ತಿಳಿಸಿ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಾಗುವುದು.

(iii) ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ಕ್ಷೇತ್ರದ ಕೃಷಿ ಕಾರ್ಮಿಕರಿಗೆ ಭೂ ನ್ಯಾಯ ಮಂಡಳಿಯವರ ತೀರ್ಮಾನದಿಂದ ಅನ್ಯಾಯವಾಗಿರುವ ಬಗ್ಗೆ

ಶ್ರೀ ಕೆ. ಕುಶಾಲ (ಸುಳ್ಯ).—ಸನ್ಮಾನ್ಯ ಅಧ್ಯಕ್ಷರೆ, ಭೂ ನ್ಯಾಯ ಮಂಡಳಿಯಿಂದ ಡಿಕ್ಲರೇಶನ್ ದಾರರಿಗೆ, ಸರಿಯಾಗಿ ನ್ಯಾಯ ಸಿಗುತ್ತಿಲ್ಲ. ಭೂನ್ಯಾಯ ಮಂಡಳಿ ಕಾನೂನಿನಲ್ಲಿ ಎಷ್ಟು ಸೆಂಟ್ಸು ತನಕ ತೀರ್ಪು ನೀಡಬಹುದು, ೦೦–೫ ಸೆಂಟ್ಸು, ಯಾ. ೨–೫ ಸೆಂಟ್ಸ್‌ಗಿಂತ ಜಾಸ್ತಿ ನೀಡಲು ಅವಕಾಶವಿದೆಯೆ, ಇಲ್ಲವೇ, ಮತ್ತು ಓವಿ, ಡಿಕ್ಲೇರೇಷನ್ ಪ್ರಕಾರ ನಿಜವಾಗಿ, ಮನೆ ನಿವೇಶನ ಒಂದೆರಡು ತೆಂಗಿನ ಸಸಿ, ಬಾಳೆ, ಅಂಗಳಗಳನ್ನು ಮಾಡಿದ್ದಲ್ಲಿ ಅದನ್ನೇ ನೀಡಬಾರದಾಗಿ, ಕಾನೂನಿನಲ್ಲಿ

ಬರುವುದೇ ಈ ರೀತಿಯಿಂದ ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ಕ್ಷೇತ್ರದಲ್ಲಿ ಕೃಷಿ ಕಾರ್ಮಿಕರಿಗೆ, ಡಿಕ್ಲರೇಷನ್ ನಲ್ಲಿ ಅನ್ಯಾಯವಾಗಿದೆ, ಇದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ವಿನಂತಿಸುತ್ತೇನೆ.

ಶ್ರೀ ವಿ.ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

(iv) ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕು AEO ರವರ ಕಛೇರಿಯಲ್ಲಿ ಭ್ರಷ್ಟಾಚಾರ ನಡೆದಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ.—ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕು ವಿದ್ಯಾಧಿಕಾರಿಗಳು ಆ ತಾಲ್ಲೂಕಿನಲ್ಲಿ ನಡೆಸಿರುವ ಭ್ರಷ್ಟಾಚಾರದ ಬಗ್ಗೆ ಪ್ರಾಥಮಿಕ ಶಿಕ್ಷಣ ಸಚಿವರು ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ನಿರ್ದೇಶಕರನ್ನು ಈ ಬಗ್ಗೆ ಪರಿಶೀಲಿಸುವಂತೆ ಆಜ್ಞೆ ಮಾಡಿದ್ದು ಅವರು ಎರಡು ವಾರಕಾಲ ತನಿಖೆ ನಡೆಸಿ, ಸಹಾಯಕ ವಿದ್ಯಾಧಿಕಾರಿ ಶ್ರೀ ಎಂ. ಜವರಯ್ಯನವರನ್ನು ಅಮಾನತ್ತಿನಲ್ಲಿಟ್ಟು ಅವರು ದುರುಪಯೋಗ ಮಾಡಿರುವ ೯೮ ಸಾವಿರಗಳ ಬಗ್ಗೆ ಇನ್ನೂ ಹೆಚ್ಚಿನ ವಿವರವಾದ ತನಿಖೆ ನಡೆಸಬೇಕಾಗಿದೆ ಎಂಬ ವರದಿಯನ್ನು ಅವರ ಪತ್ರದ ಸಂಖ್ಯೆ ನಂಬರ್ ಟಿ ಆರ್ ಓ ಸಿ ಎ೧ ೮೫-೮೬ ದಿನಾಂಕ ೨೬.೬.೮೫ರಂದು ಶಿಕ್ಷಣ ಇಲಾಖೆ ಆಯುಕ್ತರಿಗೆ ಮತ್ತು ಪ್ರಾಥಮಿಕ ಶಿಕ್ಷಣ ಸಚಿವರಿಗೆ ವರದಿಯನ್ನು ಸಲ್ಲಿಸಿದ್ದಾರೆ. ಹೀಗಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳದೆ ಅವರ ಬದಲಾಗಿ ಇವರನ್ನು ಮೈಸೂರು ಜಿಲ್ಲೆಯ ಇ.ಒ. ಆಗಿ ಬಡ್ತಿ ನೀಡಬೇಕೆಂದು ಸರಕಾರ ಯೋಚಿಸುತ್ತಿರುವುದಾಗಿ ತಿಳಿದುಬಂದಿದೆ. ಆದ್ದರಿಂದ ಈ ರೀತಿ ೯೮ ಸಾವಿರ ರೂಪಾಯಿ ದುರುಪಯೋಗ ಮಾಡಿರುವ ಭ್ರಷ್ಟ ಅಧಿಕಾರಿಗಳ ಬಗ್ಗೆ ಸರಕಾರ ರಕ್ಷಣೆ ಕೊಟ್ಟು ಬಡ್ತಿ ನೀಡುವ ಯೋಜನೆ ಕೈಬಿಟ್ಟು ಈ ಭ್ರಷ್ಟಾಚಾರದ ಬಗ್ಗೆ ಸಂಬಂಧಪಟ್ಟ ಸಹಾಯಕ ವಿದ್ಯಾಧಿಕಾರಿ ವಿಚಾರದಲ್ಲಿ ಸರಕಾರ ಕ್ರಮ ಕೈಗೊಂಡಿದೆಯೇ ಎಂಬ ಬಗ್ಗೆ ಸರಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಎಂ. ರಘುಪತಿ (ಪ್ರಾಥಮಿಕ ಶಿಕ್ಷಣ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಅಧಿಕಾರಿಗಳಿಂದ ಫೈಲ್ ತರಿಸಿಕೊಂಡು ನೋಡುತ್ತೇನೆ, ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

(v) ಮಂಗಳೂರಿನ ಮಂಗಳ ಕ್ರೀಡಾಂಗಣದ ಉಸ್ತುವಾರಿಯನ್ನು ಸರಿಯಾಗಿ ನೋಡಿಕೊಳ್ಳದೇ ಇರುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಮಂಗಳ ಕ್ರೀಡಾಂಗಣದ ಒಡೆತನ ಯುವಜನ ಸೇವಾ ಇಲಾಖೆಗೋ, ಮಂಗಳೂರು ಮಹಾನಗರ ಪಾಲಿಕೆಗೋ ಎಂಬುದು ಇನ್ನೂ ತಿಳಿಯದಾಗಿದೆ. ಈ ಕ್ರೀಡಾಂಗಣದ ಉಸ್ತುವಾರಿಯನ್ನು ಯಾರೂ ಮಾಡುತ್ತಿಲ್ಲವೆಂದು ತಿಳಿದಿದೆ. ಈ ಕ್ರೀಡಾಂಗಣದಲ್ಲಿ ಕಾವಲುಗಾರನೂ ಇಲ್ಲ. ವಾರಸುದಾರರು ಇಲ್ಲದಂತಿರುವ ಆವರಣದಲ್ಲಿ ಅನೇಕ ಸಮಾಜ ವಿರೋಧಿ ಕೆಲಸಗಳೂ ನಡೆಯುತ್ತಿವೆ, ಎಂಬುದು ಜನಜನಿತ. ಕ್ರೀಡಾ ಪಟುಗಳ ಅನುಕೂಲಕ್ಕಾಗಿ ಇಲ್ಲಿನ ಆವರಣದಲ್ಲಿ ನಲ್ಲಿ ನೀರಿನ ಸೌಕರ್ಯವನ್ನು ಒದಗಿಸಲಾಗಿದೆ. ಕೆಲವು ತಿಂಗಳುಗಳಿಂದ ಈ ನಲ್ಲಿಯ ನೀರನ್ನು ಮತ್ತು ಬೆಳಿಗ್ಗೆ ಬಸ್ಸುಗಳನ್ನು ತೊಳೆಯಲು ದುರುಪಯೋಗ ಪಡಿಸಲಾಗುತ್ತಿದೆ. ಇದನ್ನು ಪರಿಶೀಲಿಸುವವರು ಯಾರು ? ಸರಕಾರದ ಸೊತ್ತು ಈ ರೀತಿ ಪೋಲಾಗುವಾಗದಂತೆ "ಉದಯವಾಣಿ" ಳ.೮.೮೫ರ ಸಂಚಿಕೆಯಲ್ಲಿ ಚಿತ್ರ ಸಹಿತ ವಿವರ ಇದೆ. ಈ ಕ್ರೀಡಾಂಗಣದ ಆಡಳಿತ ಯಾರಿಗೆ ಎಂಬ ಕುರಿತು ಕ್ರೀಡಾ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—ಈ ವಿಷಯದ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ವ್ಯವಸ್ಥೆ ಮಾಡುತ್ತೇನೆ.

(vi) ಕುಂದಾಪುರ ತಾಲ್ಲೂಕಿನ ಗಂಗೋಳ್ಳಿಯಲ್ಲಿ ಸುಮಾರು ೨೫ ಯಾಂತ್ರಿಕ ದೋಣಿಗಳು ಬೆಂಕಿ ಅಕಸ್ಮಿಕದಿಂದ ಸುಟ್ಟು ಹೋಗಿ ಸಾವಿರಾರು ರೂಪಾಯಿಗಳ ನಷ್ಟ ಉಂಟಾಗಿರುವ ಬಗ್ಗೆ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಸನ್ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕು ಗಂಗೋಳ್ಳಿಯಲ್ಲಿ ಸುಮಾರು ೨೫ ಯಾಂತ್ರಿಕ ದೋಣಿಗಳನ್ನು ಜೂನ್ ತಿಂಗಳಲ್ಲಿ ಮೇಲೆ ಎಳೆದು ಮಳೆಯ ರಕ್ಷಣೆ